ಇಂದು ದಿನಾಂಕ:08.02.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿಗಳ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:

8. ದಾವಾ ಎ ಷೆಡ್ಯೂಲ್ ಆಸ್ತಿಯಲ್ಲಿನ ಕಟ್ಟಡ ನಿರ್ಮಿಸುವಾಗ ಪರವಾನಿಗೆ ಪಡೆದುಕೊಂಡಿದ್ದೆ. ಆ ಪರವಾನಿಗೆಯಲ್ಲಿ ಆಸ್ತಿಯ ಚಕ್ಕುಬಂದಿ ಬರೆದಿದೆ ಎಂದರೆ ಸರಿ. ಅದನ್ನು ಹಾಜರುಪಡಿಸಿಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ದಾವಾ ಆಸ್ತಿ ಇ-ಸ್ವತ್ತು ಆಗಿಲ್ಲ. ಸರ್ವೆ ನಂ.9 ಮತ್ತು 181 ಆಸ್ತಿಗಳು ಮೊದಲು ನಮಗೆ ಸೇರಿದ್ದವು ಎಂದರೆ ಸಾಕ್ಷಿಯು ಸರ್ವೆ ನಂ.9 ಮಾತ್ರ ನಮಗೆ ಸೇರಿದ್ದ ಬಗ್ಗೆ ನನಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಖರೀದಿಗೆ ತೆಗೆದುಕೊಂಡ ಸರ್ವೆ ನಂ.129/ಪಿ, 5 ಗುಂಟೆ ಆಸ್ತಿಯನ್ನು ಸರ್ವೆ ನಂ.181 ರ ಪಕ್ಕದಲ್ಲಿ ಪೋಡಿ ಮಾಡಿಸುವ ಬದಲಾಗಿ, ದಾವಾ ಎ ಷೆಡ್ಯೂಲ್ ಸ್ವತ್ತಿನಲ್ಲಿ ಮಾಡಿಸಿದ್ದೇನೆ ಎಂದರೆ ಸಾಕ್ಷಿಯು ಜಾಗ ಎಲ್ಲಿತ್ತು ಅಲ್ಲಿಯೇ ಪೋಡಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಖರೀದಿಗೆ ತೆಗೆದುಕೊಂಡ ದಾವಾ ಎ ಷೆಡ್ಯೂಲ್ ಆಸ್ತಿ ನಾನು ದಾವಾ ತೋರಿಸಿದ ಚಕ್ಕುಬಂದಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಅದು ಸರ್ವೆ ನಂ.9 ಮತ್ತು 181 ರ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ತಪ್ಪು ಪೋಡಿ ಮಾಡಿಸಿಕೊಂಡು ನಮಗೆ ಸೇರಿದ ಜಾಗವನ್ನು ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಮ್ಮ ಜಾಗವನ್ನು ಸೇರಿ ಕಟ್ಟಡ ನಿರ್ಮಿಸುವಾಗ ಪಟ್ಟಣ ಪಂಚಾಯಿತಿಗೆ ನಾನು ದೂರು ನೀಡಿಲ್ಲ. ಪ್ರತಿವಾದಿಗಳು ಪರವಾನಿಗೆ ತೆಗದುಕೊಂಡಿದ್ದರೆ ಅದನ್ನು ರದ್ದು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಪರವಾನಿಗೆ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ದೂರು ನೀಡಲು ಮತ್ತು ಪರವಾನಿಗೆ ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂದು ಪರಿಶೀಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುವುದರಿಂದ ಅದರ ಅವಶ್ಯಕತೆ ಕಂಡುಬರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಕಟ್ಟಡ ಕಟ್ಟಲು ಪ್ರಾರಂಬಿಸಿದಾಗಲೇ ನಾನು ದಾವೆ ಸಲ್ಲಿಸಿರುತ್ತೇವೆ. ನಾವು ಪ್ರತಿವಾದಿಗಳು ಸೇರಿದ ಜಾಗವನ್ನು ಸೇರಿಸಿ ಪೋಡಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ತಪ್ಪು ಪೋಡಿ ಮಾಡಿಸಿಕೊಂಡಿರುವುದು ಗೊತ್ತಾಗುತ್ತದೆ ಎಂಬ ಕಾರಣದಿಂದಲೇ ಪಂಚಾಯಿತಿಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸರ್ವೆ ನಂ.129/ಪಿ ರಲ್ಲಿ ದಾವಾ ಆಸ್ತಿಯ ಪಕ್ಕದಲ್ಲಿಯೇ ಸ್ವಾಧೀನ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು 5 ಗುಂಟೆ ಸ್ವತ್ತನ್ನು ಹೊಂದಿ ಅದರ ಪೂರ್ವ

ದಿಕ್ಕಿಗೆ ಕಳಸ-ಕೊಟ್ಟಿಗೆಹಾರ ರಸ್ತೆ ಇದೆ ಎಂದರೆ ಸಾಕ್ಷಿಯು ಸರಿ ಎಂದು ಒಪ್ಪಿಕೊಂಡು ಆ ನಂತರ ನನಗೆ ದಿಕ್ಕು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಅದರ ಪಶ್ಚಿಮ ದಿಕ್ಕಿಗೆ ಮೊದಲು ಬಿ.ಟಿ ಮೈದಾನ ಈಗ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್ ಇದೆ ಎಂದರೆ ಸರಿ. ಪ್ರತಿವಾದಿಯರ ದಕ್ಷಿಣ ದಿಕ್ಕಿಗೆ ಕೆ.ಎಂ ರಸ್ತೆ ಇದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಪೀಟರ್ ಅರೇನಾರವರ ಜಾಗ ಇದೆ ಎಂದರೆ ಸಾಕ್ಷಿಯು ಆ ಜಾಗವನ್ನು ನಾವು ಈಗ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ಆ ಜಾಗವನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ನಾವು ಖರೀದಿಸಿದ ಜಾಗ ಸರ್ವೆ ನಂ.181 ಮತ್ತು 9 ರ ಪಕ್ಕದಲ್ಲಿ ಇದೆ ಎಂದರೆ ಸರಿಯಲ್ಲ.

10. ಪ್ರತಿವಾದಿಗಳು ಸ್ವಾಧೀನದಲ್ಲಿರುವ ಆಸ್ತಿ ಮೊದಲು ಯೂಸುಫ್ ಬೇಗ್ ಎಂಬುವವರಿಗೆ 1951-52 ನೇ ಸಾಲಿನಲ್ಲಿ ಮಂಜುರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದು ಸ್ವಾಧೀನಾನುಭವದಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಮರಣದ ನಂತರ ಅವರ ಪತ್ನಿ ಹಾಶಬೀರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಾಶಬೀ ಮತ್ತು ಅವರ ಮಕ್ಕಳು ಒಂದನೇ ಪ್ರತಿವಾದಿಯ ತಂದೆಯಾದ ಇಬ್ರಾಹಿಂರವರಿಗೆ ಆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು ಕ್ರಯ ಪತ್ರ ಸಂ.155/1970-71, ದಿನಾಂಕಃ05.06.1970 ರಂತೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ 1 ನೇ ಪ್ರತಿವಾದಿಯ ತಂದೆ ತಮ್ಮ ಹೆಸರಿಗೆ ಖಾತೆ ದಾಖಲಿಸಿಕೊಂಡು ಸ್ವಾಧೀನಾನುಭವದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯಲ್ಲಿ ದಿನಾಂಕಃ13.06.2005 ರಂದು ಪಂಚಾಯಿತಿಯಿಂದ ಪರವಾನಿಗೆ ಪಡೆದು ಕಟ್ಟಡ ನಿರ್ಮಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇಬ್ರಾಹಿಂರವರು ಕಟ್ಟಿದ ಕಟ್ಟಡ ಈಗಲೂ ಇದೆ ಎಂದರೆ ಸರಿ. ಇಬ್ರಾಹಿಂರವರು ದಾವೆ ಸಲ್ಲಿಸುವ 3 ವರ್ಷಗಳ ಪೂರ್ವದಲ್ಲಿ ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಅವರು ಮರಣ ಹೊಂದಿರುವುದು ನಿಜ ಎಂದು ನುಡಿಯುತ್ತಾರೆ. ಅವರ ಮರಣದ ನಂತರ ಪ್ರತಿವಾದಿಗಳು ದಾವಾ ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ.

11. ಕೆ.ಎಂ ರಸ್ತೆಯಿಂದ ಎಷ್ಟು ದೂರದಲ್ಲಿ ಪ್ರತಿವಾದಿಗಳ ಕಟ್ಟಡ ಇದೆ ಎಂದು ನನಗೆ ಗೊತ್ತಿಲ್ಲ. ಕಳಸ-ಕೊಟ್ಟಿಗೆಹಾರ ರಾಜ್ಯ ಹೆದ್ದಾರಿಯಿಂದ ಪ್ರತಿವಾದಿಗಳ ಕಟ್ಟಡ ಎಷ್ಟು ದೂರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಕೆ.ಎಸ್.ಆರ್.ಟಿ.ಸಿ. ಇಲಾಖೆರವರು ತಮ್ಮ ಜಾಗದ ಪೂರ್ವ ದಿಕ್ಕಿಗೆ ಕಾಂಪೌಂಡ್ ನಿರ್ಮಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಗಳ ಸ್ವಾಧೀನದಲ್ಲಿರುವ ಜಾಗ ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಮಾರ್ಜಿನನ್ನು ಕಳೆದರೇ 5 ಗುಂಟೆಗಿಂತ ಕಡಿಮೆ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ಜಾಗವನ್ನು ಯಾವುದೇ ರೀತಿಯಿಂದಲೂ ಒತ್ತುವರಿ ಮಾಡಿದಿದ್ದರೂ

ಸಹ ಅಕ್ರಮ ಲಾಭಗಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹದ್ದುಬಸ್ತು ಮಾಡಲು ಅಳತೆಗೆ ಅರ್ಜಿ ನೀಡಿದಾಗ ಆ ವಿಚಾರವನ್ನು ಪ್ರತಿವಾದಿಗಳ ಗಮನಕ್ಕೆ ತಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಾಗ ಮತ್ತು ದಾವಾ ಸ್ವತ್ತು ಎರಡನ್ನು ಸೇರಿ ಅಳತೆ ಮಾಡಿದ್ದರೆ ಸತ್ಯಾಂಶ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿಯು ಅಳತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಸ್ವತ್ತನ್ನು ಅಳತೆ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಹದ್ದುಬಸ್ತು ಸರ್ವೆಯನ್ನು ನಮ್ಮ ಆಸ್ತಿಗೆ ಮಾಡಿಸಲಾಗಿದೆ ಎಂದು ನುಡಿಯುತ್ತಾರೆ. ಆದ್ದರಿಂದ ಅವರ ಆಸ್ತಿಯನ್ನು ಸರ್ವೆ ಮಾಡಿಸಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿ ಇರುವ ತನಕ ಮಾಡಿಸಿದೆ ಎಂದು ನುಡಿಯುತ್ತಾರೆ. ನಾವು ಅಪಾದಿಸಿದಂತೆ ನಮಗೆ ಸೇರಿದ ಯಾವುದೇ ಆಸ್ತಿಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ತೊಂದರೆ ಕೊಡುವ ಉದ್ದೇಶದಿಂದ ಮತ್ತು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಹದ್ದುಬಸ್ತುವಿಗೆ ಸಂಬಂದಿಸಿದ ದಾಖಲಾತಿಗಳು ಸುಳ್ಳು ಎಂದರೆ ಸರಿಯಲ್ಲ.

<u>**ಮರು ವಿಚಾರಣೆ:**</u> ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ